# ಅಧ್ಯಾಯ–1

# ಪ್ರಸ್ತಾವನೆ

1.1 ಅಧ್ಯಯನದ ಉದ್ದೇಶ

1.2 ಅಧ್ಯಯನದ ವ್ಯಾಪ್ತಿ

1.3 ಈ ಕುರಿತು ನಡೆದಿರುವ ಅಧ್ಯಯನಗಳು

1.4 ಅಧ್ಯಯನದ ಸೈದ್ಧಾಂತಿಕತೆ

## ಪ್ರಸ್ತಾವನೆ:

ಸ-ಹಿತವಾದುದು ಸಾಹಿತ್ಯ. ಸಾಹಿತ್ಯ ಎನ್ನುವುದು ನಿಂತ ನೀರಲ್ಲ. ಅದು ಯಾವಾಗಲೂ ಹರಿಯುತ್ತಲೇ ಇರುತ್ತದೆ. ಸಹೃದಯನಾದ ಓದುಗ ಅದನ್ನು ತನ್ನೊಳಗೆ ಹರಿಯಬಿಡುತ್ತಾನೆ. ಈ ಕಾರಣದಿಂದಲೇ ಸಾಹಿತ್ಯ ಮತ್ತು ಸಹೃದಯತೆ ಮನುಷ್ಯ ಜೀವನದಲ್ಲಿ ಪ್ರತಿಬಿಂಬದಂತೆ ಕೆಲಸ ನಿರ್ವಹಿಸುತ್ತದೆ. ಪ್ರತಿಯೋರ್ವ ಸಾಹಿತಿಯು ತನ್ನದೇ ಆದ ಬರವಣಿಗೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದಿರುವುದರಿಂದ ಸಾಹಿತ್ಯದ ಗುಣಮಟ್ಟಗಳು ಅದರದ್ದೇ ಆದ ವರ್ಚಸ್ಸನ್ನು ಪಡೆಯಲು ಸಹಕಾರಿಯಾಗುತ್ತವೆ. ದಕ್ಷಿಣ ಕನ್ನಡ ಜಿಲ್ಲೆ ಹಲವಾರು ಕವಿ, ಕವಯತ್ರಿಯರನ್ನು ಪಡೆದ ಜಿಲ್ಲೆ. ತುಳು ಅಥವಾ ಕನ್ನಡ ಬರವಣಿಗೆಗಳಲ್ಲಿ ಒಂದನ್ನು ಪ್ರಧಾನವಾಗಿಸಿಕೊಂಡು ಅಥವಾ ಎರಡು ಭಾಷೆಗಳಲ್ಲೂ ಬರವಣಿಗೆಯಿದ್ದರೂ ಒಂದು ಭಾಷೆಯನ್ನು ಮಾತ್ರ ತಮ್ಮ ಸಾಹಿತ್ಯದ ಭಾಷೆಯನ್ನಾಗಿಸಿ ಜನ ಸಾಮಾನ್ಯರಿಗೆ ಹತ್ತಿರವಾಗಿ ಬಿಡುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ ದಕ್ಷಿಣ ಕನ್ನಡದಲ್ಲಿ ಪ್ರಮುಖವಾದ ಸಾಹಿತಿಯಾಗಿ ಅಮೃತ ಸೋಮೇಶ್ವರರು ಕಾಣಿಸಿಕೊಳ್ಳುತ್ತಾರೆ.

"ಹಿರಿಯ ವಿದ್ವಾಂಸರೂ ದ್ರಾವಿಡ ಪರಂಪರೆಯ ಅಪೂರ್ವ ಜಾನಪದ ತಜ್ಞರೂ ಆಗಿರುವ ಡಾ. ಅಮೃತ ಸೋಮೇಶ್ವರರು ಕನ್ನಡ ಮತ್ತು ತುಳು ಸಾಹಿತ್ಯದ ಎಲ್ಲಾ ಕ್ಷೇತ್ರಗಳಲ್ಲೂ ಸಮಾನ ಆಸಕ್ತಿ ಮತ್ತು ಅಭಿರುಚಿಯಿಂದ ಕೆಲಸ ಮಾಡುತ್ತಲೇ ಬಂದವರು. ಪ್ರತಿಭೆ ಮತ್ತು ಕಾವ್ಯಶಕ್ತಿ ಸಮ್ಮಿಳಿತ ಬರವಣಿಗೆ ಇವರದು. ಪ್ರತಿಭೆ, ಪ್ರಯೋಗಶೀಲಗುಣ, ಸೃಜನ ಶೀಲತೆ, ವೈಚಾರಿಕತೆ, ಸ್ಥೂಲ – ಸೂಕ್ಷ್ಮ ಸಮತೋಲನ ವಿವೇಚನೆ, ಹಳತು-ಹೊಸತುಗಳ ಬೆಸುಗೆಯಲ್ಲಿ ಬಳಸುವ ಭಾಷೆ, ಸಂಸ್ಕೃತಿ ಚಿತ್ರಣ ಮೊದಲಾದ ಚೌಕಟ್ಟುಗಳುಳ್ಳ ಬರಹಗಳು ಅಮೃತರ ಪ್ರಧಾನ ವೈಶಿಷ್ಟ್ಯವಾಗಿದೆ. ಕ್ರಿಯಾತ್ಮಕ ಶಕ್ತಿಯುಳ್ಳ ವೈವಿಧ್ಯಪೂರ್ಣ ಕಥಾವಸ್ತುಗಳನ್ನು ಜಾನಪದದಿಂದ ಆಯ್ಕೆ ಮಾಡಿಕೊಳ್ಳುವ ಕೌಶಲವೂ ಅವರಿಗೆ ಕರಗತ. ಈ ಮೂಲಕ ಲವಲವಿಕೆಯ ರೋಚಕ ರಂಗಪಠ್ಯ ನಿರ್ಮಾಣದ ಟಂಕಸಾಲೆ ಯಾವತ್ತೂ ಅವರ ಅನುಭವ ಕೋಶದಲ್ಲಿ ಸದಾ ಜಾಗೃತವಾಗಿರುತ್ತದೆ.

ಅವರಿಗೆ ಕರ್ನಾಟಕ ಪರಂಪರೆಯ ಪ್ರಾಚೀನ ಮತ್ತು ಆಧುನಿಕ ಕನ್ನಡ ಹಾಗೂ ತುಳು ಜಾನಪದದ ಆಳವಾದ ಜ್ಞಾನವಿದೆ. ಜೊತೆಗೆ ಅವರ ಮಾತೃಭಾಷೆ ಮಲೆಯಾಳವಾಗಿರುವುದು ಒಂದು ಹೆಚ್ಚಿನ ಅರ್ಹತೆಯೆನಿಸಿಕೊಳ್ಳುತ್ತದೆ. ಭಾಷೆ, ವ್ಯಾಕರಣ, ಛಂದಸ್ಸು ಮೊದಲಾದ ಪಂಡಿತ ಪರಂಪರೆಯ ವಿದ್ವಾಂಸರಾಗಿ ಯಕ್ಷಗಾನ ಪ್ರಸಂಗ ಸಾಹಿತ್ಯ ರಚನೆಯ ಕ್ಷೇತ್ರದಲ್ಲಿ ವಿಶೇಷ ಪರಿಶ್ರಮವಿದೆ. ಕಾವ್ಯ, ಸಂಗೀತ-ಭಾಗವತಿಕೆ ಮಟ್ಟಿನ ತಿಳುವಳಿಕೆ ಸಾಕಷ್ಟು ಇದೆ. ಇವೆಲ್ಲವುಗಳ ಸಮಷ್ಟಿ ಅನುಭವ ಇಲ್ಲಿ ಕೆಲಸ ಮಾಡುತ್ತದೆ. ಹೀಗಾಗಿ ಅಮೃತರ ಅನುಭವ ಎಂದರೆ ತುಂಬಿದ ಕೊಡದ ಹಾಗೆ. ಹೇಗೆ ನದಿಯೊಂದು ಆಳವಾಗಿದ್ದಷ್ಟೂ ಶಾಂತವಾಗಿರುತ್ತದೋ ಹಾಗೆಯೇ ಅಮೃತರ ಅರಿವಿನ ಅನುಭವ ಕೂಡಾ ಹಾಗೆ. ಹಾಗಾಗಿ ಸಂಭಾಷಣೆಯ ಮಾತುಕತೆಗೆ ಬಳಸಿಕೊಳ್ಳುವ ಸಾಹಿತ್ಯದ ಆಯ್ಕೆ ಅವರಿಗೆ ಸಾಧ್ಯವಾಗುತ್ತದೆ. ತುಳು ಮೌಖಿಕ ಸಾಹಿತ್ಯವನ್ನು ನಾಟಕ, ಯಕ್ಷಗಾನ ಪ್ರಸಂಗ, ಬಾನುಲಿ ರೂಪಕ, ನೃತ್ಯರೂಪಕ, ಸಿನಿಮಾ ಹಾಡು, ಸಾಹಿತ್ಯ ರಚನೆ ಮೊದಲಾದ

ಪ್ರಕಾರಗಳಲ್ಲಿ ಪ್ರಯೋಗಿಸಬಹುದಾದ ಸಾಧ್ಯತೆಗಳನ್ನು ಇವರು ಚೆನ್ನಾಗಿ ಬಳಸಿಕೊಂಡವರಾಗಿದ್ದಾರೆ". (ಡಾ. ವಾಮನ ನಂದಾವರ, 2009, ಪು.ಸಂ 15-16)

ಸಾಹಿತ್ಯವೆನ್ನುವುದು ಜೀವನದ ಪ್ರತಿಬಿಂಬ. ಸಾಹಿತ್ಯವು ಜೀವನದ ವಿಮರ್ಶೆ. ಈ ಹಿನ್ನೆಲೆಯಲ್ಲಿ ಅಮೃತರ ಸಾಹಿತ್ಯ ಪ್ರಕಾರಗಳಾದ ಕಾದಂಬರಿ, ಕಥೆ, ನಾಟಕ, ಯಕ್ಷಗಾನ ಪ್ರಕಾರಗಳನ್ನು ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣದಲ್ಲಿ ಗಮನಿಸುವುದು ಮತ್ತು ಅಧ್ಯಯನ ಮಾಡುವುದು ಬಹಳ ಮುಖ್ಯ. ನಾಲ್ಕು ದಶಕಗಳಿಂದ ಬರೆಯಲು ಪ್ರಾರಂಭಿಸಿದ ಅಮೃತರು ಇದುವರೆಗೂ ಸಾಹಿತ್ಯದಲ್ಲಿ ತನ್ನತನವನ್ನು ಕಾಯ್ದುಕೊಂಡು ಬಂದಿರುತ್ತಾರೆ. ಸಾಹಿತ್ಯದ ಯಾವುದೇ ಪಂಥ ಸಂಪ್ರದಾಯ ಅವರ ಮೇಲೆ ಹೆಚ್ಚು ಪರಿಣಾಮ ಬೀರಲಿಲ್ಲ. ಅವುಗಳಲ್ಲಿನ ಪ್ರಭಾವಗಳನ್ನು ಮಾತ್ರ ಬಳಸಿಕೊಂಡು ಬರೆದರು. ಈ ಕಾರಣದಿಂದ ಅಮೃತರ ಬರಹಗಳು, ಕೃತಿಗಳು ಕನ್ನಡದ ಇತರ ಲೇಖಕರಿಗಿಂತ ತೀರಾ ಭಿನ್ನವಾಗಿ ಕಂಡು ಬಂದಿವೆ.

"ಮೂವರವ್ವೆಯರ ಮಡಿಲಲ್ಲಿ ಹಸುಮಗುವಾಗಿ, ಹಾಲುಂಡು ಬೆಳೆಯುತಿಹ ಕಂದ ನಾನು"(ಅಮೃತ ಸೋಮೇಶ್ವರ,1974,ಪು.ಸಂ 17) 'ಅವ್ವೆಯರು ಮೂವರು' ಎನ್ನುವ ಕವನದಲ್ಲಿ ಮೂರು ಭಾಷೆಗಳು ಹಾಗೂ ಮೂರು ಸಂಸ್ಕೃತಿಗಳು ಸೇರಿ ತನ್ನನ್ನು ಬೆಳೆಸಿದ ಬಗೆಯನ್ನು ಅಮೃತರು ಸೂಚ್ಯವಾಗಿ ತಿಳಿಸಿದ್ದಾರೆ. ಹೀಗೆ ಮೂರು ಭಾಷೆಗಳಲ್ಲಿ ಬರವಣಿಗೆಯ ಹಿಡಿತ ಇರುವ ಸಾಹಿತಿಗಳು ದಕ್ಷಿಣ ಕನ್ನಡದಲ್ಲಿ ಯಾರೂ ಇಲ್ಲ. ಅಮೃತರ ಬರವಣಿಗೆಯ ವಿಶೇಷತೆಯೇನೆಂದರೆ ತಾನು ನಿರೂಪಿಸುವ ಬರಹಗಳು ತನ್ನ ಜೀವನವನ್ನೂ ಅವಲಂಬಿಸಿರುತ್ತವೆ. ತನ್ನ ಬರಹಗಳು ಸಮಾಜಕ್ಕೆ ಏನನ್ನು ಹೇಳಲು ಇಚ್ಛಿಸುತ್ತವೆಯೋ ಅದರಂತೆ ಬದುಕನ್ನು ವಿನಿಯೋಗಿಸುವ ಯಾರಲ್ಲೂ ಇಲ್ಲದ ವ್ಯಕ್ತಿತ್ವ ಇವರಲ್ಲಿವೆ. ಈ ಕಾರಣದಿಂದ ಅಂದಿನಿಂದ ಇಂದಿನವರೆಗೂ ಅವರ ಬರಹಗಳು ಶ್ರೇಷ್ಠತೆಯನ್ನು ಪಡೆದುಕೊಂಡಿವೆ. ಸಮಾಜದಲ್ಲಿ ಆಗುವ ಅನ್ಯಾಯಗಳನ್ನು ನೇರವಾಗಿ ಖಂಡಿಸುವ ಮನೋಭಾವ ಅಮೃತರಲ್ಲಿ ರಕ್ತಗತವಾಗಿ ಬಂದಿದೆ. ಇಂಥಾ ಆಲೋಚನೆಗಳೇ ಅವರ ಬರಹಗಳ ಮೂಲಕ ವ್ಯಕ್ತವಾಗಿವೆ. ಈ ಎಲ್ಲಾ ವಿಷಯಗಳನ್ನು ಅಧ್ಯಯನಕ್ಕೆ ಒಳಪಡಿಸಿ ಅವರ ಸಾಹಿತ್ಯದಲ್ಲಿರುವ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಗಳ ಪ್ರತಿನಿಧೀಕರಣವನ್ನು ಹೊರಗೆ ತರುವಂಥ ಪ್ರಯತ್ನದಲ್ಲಿ ಸಂಶೋಧನಾತ್ಮಕ ಅಧ್ಯಯನ ಇಲ್ಲಿ ಮುಖ್ಯವಾಗುತ್ತದೆ.

ಯಾವುದೇ ಸಾಹಿತ್ಯದ ಲೇಖಕನಾಗಲಿ, ಆತ ಕೂಡ ಒಬ್ಬ ಸಮಾಜ ಜೀವಿಯೇ ಆಗಿರುತ್ತಾನೆ. ಆದುದರಿಂದ ಸಮಾಜದ ಆಗುಹೋಗುಗಳ ಬಗ್ಗೆ ಸಹಜವಾಗಿಯೇ ತನ್ನ ಸಾಹಿತ್ಯಿಕ ಬದುಕಿನಲ್ಲಿ ಪ್ರತಿಕ್ರಿಯೆಯನ್ನು ತೋರಿಸುತ್ತಾನೆ. ಸಾಹಿತ್ಯ ಪ್ರಕಾರಗಳಲ್ಲೆಲ್ಲ ಮೇರುವಾದುದನ್ನು ಸಾಧಿಸಿದ ಡಾ. ಅಮೃತ ಸೋಮೇಶ್ವರ ಅವರು ಸುಸಂಸ್ಕೃತ ಮತ್ತು ಪರಿಶುದ್ಧವಾದ ಬದುಕಿನ ಮೂಲಕ ಸಮಾಜದ ಎಲ್ಲರಿಗೂ ಆದರ್ಶವಾಗಿರುವಂತಹವರು. ಆಧುನಿಕ ಕನ್ನಡ, ತುಳು ಸಾಹಿತ್ಯಕ್ಕೆ ಮಹತ್ವಪೂರ್ಣ ಕೊಡುಗೆ ನೀಡಿದ ದಕ್ಷಿಣ ಕನ್ನಡದ ಬರಹಗಾರರಲ್ಲಿ ಅಮೃತ ಸೋಮೇಶ್ವರರು ಒಬ್ಬರಾಗಿರುವುದರಿಂದ ಅವರ ಸಾಹಿತ್ಯದಲ್ಲಿನ ಪ್ರಾದೇಶಿಕ

ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ ಎನ್ನುವ ಪ್ರಬಂಧದ ಅಧ್ಯಯನ ಕನ್ನಡ ಮತ್ತು ತುಳು ಸಾಹಿತ್ಯದ ದೃಷ್ಟಿಯಿಂದ ಮುಖ್ಯವಾಗುತ್ತದೆ.

# ಅಧ್ಯಾಯ – 1

### 1.1 ಅಧ್ಯಯನದ ಉದ್ದೇಶ:

ಅಮೃತ ಸೋಮೇಶ್ವರರು ಬರೆದಿರುವ ಕಥೆ, ಕಾದಂಬರಿ, ನಾಟಕ, ಯಕ್ಷಗಾನ, ಕಾವ್ಯ ಪ್ರಕಾರಗಳ ಬಗ್ಗೆ ಈವರೆಗೆ ಸಮಗ್ರವಾದ ಅಧ್ಯಯನಗಳಾಗಿಲ್ಲ. ಈ ಪ್ರಬಂಧದ ಮೂಲ ಉದ್ದೇಶ ಅಮೃತರ ಸಾಹಿತ್ಯದಲ್ಲಿರುವ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣದ ನೆಲೆಗಳನ್ನು ಗುರುತಿಸುವುದು. ಪ್ರತಿನಿಧೀಕರಣಗೊಳ್ಳುವ ಹುಡುಕಾಟದಲ್ಲಿ ಅಮೃತರ ವ್ಯಕ್ತಿತ್ವದ ಮೂಲಕ ಅನಾವರಣಗೊಂಡಿರುವ ಸಾಹಿತ್ಯ ಪ್ರಕಾರಗಳ ಅಸ್ತಿತ್ವ ಅನುಭವವಾಗುತ್ತದೆ. ದಕ್ಷಿಣಕನ್ನಡದಲ್ಲಿ ಹಲವಾರು ಬರಹಗಾರರಿಗೆ ಹಿರಿಯಣ್ಣನಂತಿರುವ ಅಮೃತರ ಸಾಹಿತ್ಯದ ಅಧ್ಯಯನಗಳಾಗದೇ ಇರುವುದು ವಿಷಾದನೀಯ ಎಂದರೆ ತಪ್ಪಾಗಲಾರದು. ತನ್ನ ಆಲೋಚನೆಗಳನ್ನು ನೇರವಾಗಿ ಸಮಾಜದ ಮುಂದೆ ತರಬಯಸುವ ಮೇರು ವ್ಯಕ್ತಿತ್ವ ಅಮೃತ ಸೋಮೇಶ್ವರರಲ್ಲಿ ರಕ್ತಗತವಾಗಿ ಬಂದಿದೆ. ಪ್ರಾದೇಶಿಕ ಪರಿಸರದಲ್ಲಿ ಹುಟ್ಟಿ ಬೆಳೆದು ತನ್ನ ಯೋಚನೆಗಳಲ್ಲಿ ಸಾಮಾಜಿಕ ಚಿಂತನೆಯನ್ನು ಅಳವಡಿಸಿಕೊಂಡು ಜೀವನಸಾಗಿಸುತ್ತಿರುವ ಅಮೃತ ಸೋಮೇಶ್ವರರು ಶ್ರೇಷ್ಠರಾಗಿ ಕಂಡುಬರುತ್ತಾರೆ. ಅವರ ಬರಹ ಮತ್ತು ಜೀವನ ಶೈಲಿ ಸಾಮ್ಯತೆ ಪಡೆದುಕೊಂಡಿದೆ.

ಮಹಾಸಾಗರದ ಒಡಲಿನಂತೆ ಅಮೃತರ ಬರವಣಿಗೆ. ಅವರ ಲಿಖಿತ ಸಾಹಿತ್ಯಗಳ ಬಗೆಗೆ ಕೆಲವೇ ಕೆಲವು ವಿಮರ್ಶಾ ಲೇಖನಗಳು ಬಂದಿವೆ. ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆ ಎನ್ನುವ ವಿಷಯವನ್ನಿಟ್ಟುಕೊಂಡು ಯಾವುದೇ ಬರಹಗಳು ಬಂದಿಲ್ಲ. ಪ್ರಾದೇಶಿಕ ಪರಿಸರದ ಸೋಮೇಶ್ವರದಲ್ಲಿ ತನ್ನ ಬಾಲ್ಯವನ್ನು ಕಳೆದ ಮತ್ತು ದೊಡ್ಡವನಾಗುತ್ತ ಸಾಮಾಜಿಕ ಚಿಂತನೆಗಳ ಮೂಲಕ ತನ್ನ ಬದುಕನ್ನು ಬೆಳೆಸುತ್ತ ಬಂದ ಅಮೃತರ ಸಾಹಿತ್ಯದೊಳಗೆ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ವ್ಯಾಪ್ತಿ ಯಾವ ರೀತಿಯಲ್ಲಿ ಪ್ರತಿನಿಧಿಸಿಕೊಂಡಿದೆ ಎನ್ನುವ ಕಾರಣಕ್ಕಾಗಿ ಈ ಅಧ್ಯಯನ ಪ್ರಮುಖವಾಗುತ್ತದೆ. ಅಮೃತರ ವ್ಯಕ್ತಿ ಮತ್ತು ವ್ಯಕ್ತಿತ್ವದ ಬಗೆಗೆ ನಾಡಿನ ಹಲವಾರು ವಿದ್ವಾಂಸರು ತಮ್ಮ ಹೇಳಿಕೆಯನ್ನು ಅವರ 'ಸಿರಿ' ಅಭಿನಂದನಾ ಸಂಪುಟದಲ್ಲಿ(1995) ದಾಖಲಿಸಿದ್ದಾರೆ. ಆ ಹೇಳಿಕೆಗಳೇ ಈ ಅಧ್ಯಯನಕ್ಕೆ ಮುಖ್ಯ ಪ್ರೇರಣೆಯಾಗಿದೆ. ಆದುದರಿಂದ ಆ ವಿಚಾರಗಳನ್ನು ಈ ಕೆಳಗೆ ದಾಖಲಿಸಲು ಇಚ್ಛಿಸುತ್ತೇನೆ.

"ಅವರು ಮನುಷ್ಯನಾಗಿ ಸ್ನೇಹಜೀವಿ, ಅಧ್ಯಾಪಕನಾಗಿ ವಿದ್ಯಾರ್ಥಿವತ್ಸಲ, ಸಾಹಿತಿಯಾಗಿ ಬಹುಮುಖಿ, ಜಾನಪದ ವಿದ್ವಾಂಸನಾಗಿ ಸಂಮಾನ್ಯ. ಅವರ ಮಿದು ಮಾತಿನಲ್ಲಿ ಸ್ಪಷ್ಟತೆಯೂ, ಬರವಣಿಗೆಯಲ್ಲಿ ನಿರ್ದಿಷ್ಟತೆಯೂ ಹಾಸುಹೊಕ್ಕು ಅನೇಕ ವ್ಯಕ್ತಿ–ವಿಷಯಗಳಲ್ಲಿ ಅಮೃತರಿಗೆ ಅವರದೇ ಆಗಿರುವ ಖಚಿತ ಅಭಿಪ್ರಾಯಗಳಿವೆ. ಆದರೆ ಅವುಗಳನ್ನು ಪ್ರಕಟಿಸಬೇಕಾದಾಗ ಅವರು ಔಚಿತ್ಯದ, ಸಭ್ಯತೆಯ ಮಿತಿಯನ್ನು

ಲೇಶವೂ ಮೀರುವುದಿಲ್ಲ. ಇದು ನಾನು ಅವರಲ್ಲಿ ಕಂಡಿರುವ, ಮೆಚ್ಚಿರುವ – ಮಚ್ಚರಿಸುವ ಎಂದರೂ ಸರಿಯೇ ಗುಣ ವಿಶೇಷ" (ಎಮ್. ರಾಮಚಂದ್ರ,1995 ಪು.ಸಂ. 64)

"ತುಂಬ ಮೃದು ಸ್ವಭಾವದವರೂ, ದಯಾಳು ಪ್ರವೃತ್ತಿಯವರೂ ಆದ ಸೋಮೇಶ್ವರರಿಗೆ ಕಷ್ಟದಲ್ಲಿರುವವರನ್ನು ಕಂಡರೆ ಬಹಳ ಮರುಕ. ಅವರ ಈ ಗುಣವನ್ನು ಬಲ್ಲ ಹಲವು ಬಗೆಯ ವ್ಯಕ್ತಿಗಳು ಮನಕರಗುವಂತೆ ಮಾತಾಡಿ ಕಾರ್ಯ ಸಾಧಿಸಿಕೊಳ್ಳುತ್ತಿದ್ದರು. ಆರ್ಥಿಕ ತಾಪತ್ರಯ ಬಂದಾಗ ವಿದ್ಯಾರ್ಥಿಗಳು ಭೇಟಿಯಾಗಿ ಫೀಸು ಕಟ್ಟಲೆಂದು, ಪರೀಕ್ಷೆಗೆ ಹಣ ತುಂಬಲೆಂದು, ಹಾಸ್ಟೆಲ್ ಬಿಲ್ ತೆರಲೆಂದು, ಅಷ್ಟೋ ಇಷ್ಟೋ ಮೊತ್ತವನ್ನು ಪಡೆಯುತ್ತಿದ್ದರು. ಕಷ್ಟದ ಅವಧಿ ಮುಗಿದಾಗ ಮರುಪಾವತಿ ಮಾಡಲು ಮರೆಯುತ್ತಿದ್ದರು. ನಿವೃತ್ತ, ಅಶಕ್ತ ಕಲಾವಿದರು (ಮುಖ್ಯವಾಗಿ ಯಕ್ಷಗಾನದವರು) ವರ್ಷಕ್ಕೊಮ್ಮೆ ಅಥವಾ ಎರಡು ಬಾರಿ ಅಮೃತರ ಬಳಿಗೆ ಬಂದು ಸಮಸ್ಯೆಗಳನ್ನು ತೋಡಿಕೊಂಡು ಧನಸಹಾಯ ಗಿಟ್ಟಿಸಿಕೊಳ್ಳುತ್ತಿದ್ದರು. ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಸಭೆ – ಸಮಾರಂಭಗಳಿಗೆ ಮುಖ್ಯ ಅತಿಥಿಯಾಗಿ, ಅಧ್ಯಕ್ಷರಾಗಿ, ಉದ್ಘಾಟಕರಾಗಿ ಅಥವಾ ಸಮಾರೋಪಕಾರರಾಗಿ ಅಮೃತರನ್ನು ಕರೆಯುತ್ತಿದ್ದರು. ಬೆರಳೆಣಿಕೆಯ ಸಂಘಟಕರನ್ನು ಬಿಟ್ಟರೆ ಉಳಿದವರು ಅವರ ಪ್ರಯಾಣ ವಿಶ್ರಾಂತಿಗಳ ಕಡೆಗೆ ಗಮನ ಹರಿಸುತ್ತಿರಲಿಲ್ಲ. ಜೇಬಿನಿಂದ ಖರ್ಚು ಮಾಡಿಕೊಂಡು ಹಲವು ಸಮಾರಂಭಗಳಿಗೆ ಹೋಗಿ ಬರುತ್ತಿದ್ದ ಅಮೃತರು ಸಂಘಟಕರ ಕಾರ್ಯವನ್ನು ಪ್ರಶಂಶಿಸಿ ತಾವೇ ಸ್ವಲ್ಪ ದೇಣಿಗೆ ಕೊಟ್ಟು ಮರಳಿದ ನಿದರ್ಶನಗಳೂ ಇವೆ. ಸಾತ್ವಿಕರೂ ವಿಶಾಲ ಮನೋಭಾವದವರೂ ಆದ ಅಮೃತರು ಮಾನವತಾವಾದಿ ಸಾಹಿತಿ. ಮೂಢನಂಬಿಕೆ, ಸಣ್ಣತನ, ವರ್ಣದ್ವೇಷ ಇತ್ಯಾದಿಗಳನ್ನು ಖಂಡಿಸಲು ಅವರು ಹಿಂಜರಿಯುವುದಿಲ್ಲ. ಯಾರಲ್ಲೇ ಆಗಲಿ ಸಮರ್ಥನೀಯವಲ್ಲದ ನಡತೆ ಕಂಡುಬಂದರೆ ಟೀಕಿಸುತ್ತಾರೆ. ಆದರೆ ಅವರು ವಿರೋಧಿಸುವುದು ಅಂಥ ವ್ಯಕ್ತಿಯಲ್ಲಿರುವ ಸಮಾಜ ಕಂಟಕ ದೋಷಗಳನ್ನೇ ವಿನಾ ವ್ಯಕ್ತಿಯನ್ನಲ್ಲ. ಆದ್ದರಿಂದ ಅಮೃತರು ಒಂದೆಡೆ ಸುಧಾ ಪ್ರಾಪ್ತಿಯನ್ನು ಹಾರೈಸುತ್ತಾರೆ. ಇನ್ನೊಂದೆಡೆ ವಿಷ ನಿವಾರಣೆಯನ್ನು ಬಯಸುತ್ತಾರೆ". (ಅತ್ತಿಕಜೆ ವಿ.ಬಿ.,1995, ಪು.ಸಂ 67)

"ಎಲ್ಲಕ್ಕಿಂತಲೂ ನನಗೆ ಬೆರಗುಂಟು ಮಾಡಿದ ವಿಷಯವೆಂದರೆ ಹಿಂದುಳಿದ ವರ್ಗದಿಂದ ಬಂದ ಇವರು 1985ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಕಲಾ ಪದವಿ ಮತ್ತು ಚಿನ್ನದ ಪದಕವನ್ನು ಪಡಕೊಂಡದ್ದು. ಪಾಂಡಿತ್ಯವೆಲ್ಲವೂ ತಮ್ಮದೇ ಎಂದು ಬೀಗುತ್ತಿದ್ದ ಮೇಲ್ಜಾತಿಯವರು ಅಚ್ಚರಿಪಡುವಂತೆ ಕನ್ನಡ ಭಾಷೆಯನ್ನು ಕರಗತಮಾಡಿಕೊಂಡು ಅದರಲ್ಲಿ ಚಿನ್ನದ ಪದಕವನ್ನು ಗಿಟ್ಟಿಸಿದ ಇವರ ಸಾಧನೆ ಪ್ರಶಂಸನೀಯವೇ ಅಲ್ಲವೇ? ಅಷ್ಟು ಮಾತ್ರವಲ್ಲದೆ ಪದವಿ ಮುಗಿಸುವ ಮುನ್ನವೇ 'ಎಲೆಗಿಳಿ' ಎಂಬ ಸಣ್ಣಕಥಾ ಸಂಕಲನವನ್ನು ಪ್ರಕಟಿಸಿದ್ದೂ ಕೂಡಾ ಅಪೂರ್ವ ಸಾಧನೆಯೆಂದೇ ಹೇಳಬೇಕು. ಕನ್ನಡ ಸಾಹಿತ್ಯದಲ್ಲಿ ಇವರು ಕೈಯಾಡಿಸದ ಪ್ರಕಾರವೇ ಇಲ್ಲವೆನ್ನಬಹುದು. ಸಣ್ಣ ಕಥೆ, ಕವನ, ಕಾದಂಬರಿ, ರೇಡಿಯೋ ರೂಪಕ, ನಾಟಕ, ನೃತ್ಯರೂಪಕ, ವ್ಯಕ್ತಿಚಿತ್ರ, ಸಂಪಾದನೆ, ಸ್ವತಂತ್ರಗಾದೆಗಳು, ಕುಚೋದ್ಯಕೋಶ, ಯಕ್ಷಗಾನ ಕೃತಿ, ಪ್ರಸಂಗಗಳು

ಎಂದು ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ತುಳು ಸಾಹಿತ್ಯ ಕ್ಷೇತ್ರ ಮತ್ತು ಯಕ್ಷಗಾನ ಕಲೆಗೆ ಇವರ ಕೊಡುಗೆ ಅಪಾರ. ಇಷ್ಟೆಲ್ಲ ಪ್ರತಿಭೆಯಿದ್ದೂ ಇವರಿಗೆ ಸಮನಾದ ಪ್ರಚಾರವಿಲ್ಲದೆ ಒಂದು ರೀತಿಯಲ್ಲಿ ಮೂಲೆಗೆ ತಳ್ಳಲ್ಪಟ್ಟದ್ದು ಈ ದೇಶದ ವ್ಯವಸ್ಥೆಗೆ ಹಿಡಿದ ಕನ್ನಡಿ ಎಂದೇ ಹೇಳಬಹುದು". (ಸಾ.ರಾ. ಅಬೂಬಕ್ಕರ್,1995, ಪು.ಸಂ 68).

"ಅವರೊಬ್ಬ ಪ್ರಗತಿಶೀಲ ಮನೋಭಾವದ ಸಾಹಿತಿ, ಕವಿ, ಸಂಶೋಧಕ. ಕೆಲವರು ಅವರನ್ನು ಬಂಡಾಯ ಸಾಹಿತಿ ಎಂದು ಪರಿಗಣಿಸಬಹುದು. ಆದರೆ ಅವರು ತಾನು ಇಂತಹದೇ ವರ್ಗಕ್ಕೆ ಅಥವಾ ಗುಂಪಿಗೆ ಸೇರಿದವನು ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡವರಲ್ಲ. ಅವರೇ ಹೇಳುವಂತೆ". ನನಗೆ ಬರೇ ಬಣ್ಣದ ಲೇಬಲ್‌ಗಳಲ್ಲಿ ನಂಬಿಕೆಯಿಲ್ಲ. ಹಳತೆಲ್ಲವೂ ಹಾಳು, ಹೊಸತೆಲ್ಲ ಚಂದ ಎಂಬ ಧೋರಣೆ ಅವರದಲ್ಲ. ಹಳತಿನಲ್ಲಿ ಒಳ್ಳೆಯದನ್ನು ಉಳಿಸಿಕೊಂಡು, ಅದರ ಅಸ್ತಿಭಾರದ ಮೇಲೆ ಹೊಸತನ್ನು ನಿರ್ಮಿಸಬೇಕು ಎಂಬುದು ಅವರ ಧೋರಣೆಯೆಂದು ನಾನು ತಿಳಿದುಕೊಂಡಿದ್ದೇನೆ. ಅವರು ವರ್ಣಾಶ್ರಮ ಧರ್ಮ, ಉಚ್ಚ-ನೀಚ ಭಾವನೆ, ಊಳಿಗಮಾನ್ಯ ಪದ್ಧತಿ, ಯಜಮಾನ ಸಂಸ್ಕೃತಿ, ಅಂಧಾನುಕರಣೆ, ಕಂದಾಚಾರಗಳನ್ನು ವಿರೋಧಿಸುತ್ತಾರೆ, ಪ್ರತಿಭಟಿಸುತ್ತಾರೆ. ಆದರೆ, ಅವರಲ್ಲಿ ಹೋರಾಟದ ಮನೋವೃತ್ತಿ ಕಾಣದು. ಅವರಲ್ಲಿ ದ್ವೇಷವಿಲ್ಲ. ಆಟಾಟೋಪವಿಲ್ಲ ತಾನು ಹೇಳಬೇಕಾದುದನ್ನು ವಿನಯದಿಂದ ಸ್ನೇಹಶೀಲತೆಯಿಂದ, ಸೌಜನ್ಯದಿಂದ ಹೇಳುತ್ತಾರೆ. ಯಾವುದೇ ವಿಷಯದ ಕುರಿತು ತನ್ನ ನಿಲುವಿನಲ್ಲಿ ಅನ್ಯರೊಂದಿಗೆ ಸಂಧಾನ ಮಾಡಿಕೊಳ್ಳುವುದಿಲ್ಲ. ತನ್ನ ನಿಲುವನ್ನು ಖಂಡಿಸುವವರ ಬಗ್ಗೆಯೂ ಅವರು ಗೌರವ ತೋರಿಸುತ್ತಾರೆ.

ಅವರೊಬ್ಬ ಪ್ರಾಮಾಣಿಕ ಸಜ್ಜನ. ಈಗಿನ ಕಾಲದಲ್ಲಿ ನಂಬಿದಂತೆ ನಡೆದುಕೊಳ್ಳುವವರು, ನಡೆದು ಕೊಂಡುದರಲ್ಲಿ ನಂಬಿಕೆಯುಳ್ಳವರು ಸಿಗುವುದು ತುಂಬಾ ಅಪರೂಪ. ಅಮೃತರು ಅದಕ್ಕೊಂದು ಅಪವಾದ. ಡಂಭಾಚಾರ, ಸೋಗಲಾಡಿತನ ಅವರ ಹತ್ತಿರಕ್ಕೂ ಬಾರದು. ಅಮೃತರೇ ಹೇಳುವಂತೆ "ವೇದಿಕೆಯ ಮಾತು, ಬರಹದ ಮಾತು ಬದುಕಿಗೆ ಇಳಿದರೆ ತಾನೆ ತಾತ್ವಿಕತೆಗೆ ಜೀವ ಬರುವುದು". ಅಮೃತರು ಏನನ್ನು ಹೇಳುತ್ತಾರೋ ಅದರಂತೆ ನಡೆಯುತ್ತಾರೆ. ಹೇಗೆ ನಡೆಯುತ್ತಾರೋ ಅದನ್ನು ಹೇಳುತ್ತಾರೆ. ಅವರೊಬ್ಬ ಅಪ್ಪಟ ಪ್ರಾಮಾಣಿಕ ವ್ಯಕ್ತಿ" (ಬೋಳಂತಕೋಡಿ ಈಶ್ವರಭಟ್ಟ,1995,ಪು.ಸಂ 70)

ಅಮೃತರು ಮೂಲತಃ ಮಾನವತಾವಾದಿ. ಹಿಂದೊಮ್ಮೆ ಕೋಮುಗಲಭೆ ನಡೆದಾಗ ಅವರು ದುಃಖಿತರಾದದ್ದನ್ನು ಕಂಡಿದ್ದೇನೆ. "ಯಾರು ಯಾವ ಕೋಮಿನವರಾದರೇನು? ಮಾನವ ಜನಾಂಗ ಒಂದೇ ಅಲ್ಲವೇ? ಮಾನವೀಯತೆ ಮುಖ್ಯ ಅಲ್ಲವೇ? ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಬೆಳೆಸಬೇಕಾದ ಗಳಿಗೆಯಲ್ಲಿ ಈ ಗಲಭೆಗಳು ಅಗತ್ಯವೇ? ನ್ಯಾಯವೇ ಎಂದು ಪ್ರಶ್ನಿಸಿದಾಗ ಅವರ ಮಾತನ್ನು ಕೇಳಿ ನಾನು ಮೂಕವಿಸ್ಮಿತನಾಗಿದ್ದೇನೆ. ಅಮೃತ ಎನ್ನುವ ಹೆಸರಿಗೆ ಈ ಮಾತುಗಳು ಎಷ್ಟು ಅನ್ವರ್ಥವಾಗಿವೆ". (ಪಿ. ಸರ್ವೋತ್ತಮ ನಾಯಕ್,1995, ಪು.ಸಂ 81).

ಈ ಮೇಲಿನ ಕಾರಣಗಳು ಒಂದಲ್ಲ ಒಂದು ರೀತಿಯಲ್ಲಿ ನನಗೆ ಪ್ರೇರಣೆಯನ್ನು ನೀಡುತ್ತಾ ಬಂದಿದೆ. ಮಾನವತಾವಾದಿಯ ಆಲೋಚನೆಗಳು ಸಾಹಿತ್ಯದಲ್ಲಿ ಮೂಡಿ ಬರುವ ಚಿಂತನೆಯನ್ನು ನನ್ನ ಅಧ್ಯಯನಕ್ಕೆ ಪೂರಕವಾಗಿ ತೆಗೆದುಕೊಂಡಿದ್ದೇನೆ. ಇಲ್ಲಿ ಬಂದಿರುವ ಪ್ರತಿಯೊಬ್ಬರ ಹೇಳಿಕೆಗಳು ಅಮೃತ ಸೋಮೇಶ್ವರರ ಮಾನವೀಯ ಗುಣಗಳ ಬಗೆಗೆ ಮನನ ಮಾಡುತ್ತವೆ. ಈ ಎಲ್ಲಾ ಕಾರಣಗಳಿಂದ ಅಮೃತಸೋಮೇಶ್ವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ ಎನ್ನುವ ವಿಷಯದ ಆಯ್ಕೆ ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗುತ್ತದೆ.

## 1.2 ಅಧ್ಯಯನದ ವ್ಯಾಪ್ತಿ:

ನನ್ನ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ವಿಷಯದ ವ್ಯಾಪ್ತಿಯನ್ನು **ಆರು** ಅಧ್ಯಾಯಗಳಲ್ಲಿ ಅಡಕಗೊಳಿಸಿದ್ದೇನೆ ಹಾಗೂ ಆ ಅಧ್ಯಾಯಗಳಲ್ಲಿ ವಿವರಿಸಲಾದ ವಿಷಯಗಳನ್ನು ಈ ಮುಂದಿನಂತೆ ನೋಡಬಹುದು. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಅಮೃತರ ಸಾಹಿತ್ಯದ ಬಗೆಗೆ ಈ ಕುರಿತು ನಡೆದಿರುವ ಅಧ್ಯಯನಗಳು ಮತ್ತು ಅಧ್ಯಯನದ ಸೈದ್ಧಾಂತಿಕತೆಯ ಬಗೆಗೆ ಮೊದಲನೆಯ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ. ಅಧ್ಯಾಯ ಎರಡರಲ್ಲಿ ಅಮೃತರ ವ್ಯಕ್ತಿಗತ ಮತ್ತು ಸಾಹಿತ್ಯಿಕ ಪರಿಚಯದಲ್ಲಿ ಹುಟ್ಟು, ಬಾಲ್ಯ, ಯೌವನ ಹೀಗೆ ಅವರು ಸಾಹಿತ್ಯ ಲೋಕಕ್ಕೆ ನಡೆದು ಬಂದ ದಾರಿಯ ಬಗ್ಗೆ ವಿವರವಾದ ಮಾಹಿತಿಗಳ ಜೊತೆಗೆ ಸಾಹಿತ್ಯಿಕ ವಿವರಗಳನ್ನು ನೀಡಲಾಗಿದೆ.

ಅಧ್ಯಾಯ ಮೂರು ಮತ್ತು ನಾಲ್ಕರಲ್ಲಿ ಅಮೃತರ ಕಥೆ, ಕಾದಂಬರಿ, ನಾಟಕ, ಯಕ್ಷಗಾನ ಹೀಗೆ ನಾನು ಆಯ್ದುಕೊಂಡಿರುವ ಸೀಮಿತ ಸಾಹಿತ್ಯ ಪ್ರಕಾರಗಳಲ್ಲಿರುವ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣಗಳ ಬಗ್ಗೆ ಅಧ್ಯಯನ ಮಾಡಿ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಅಧ್ಯಾಯ **ಐದ**ರಲ್ಲಿ ಅಮೃತರ ಕಾವ್ಯಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

- ❖ ಎಲೆಗಿಳಿ (1957), ರುದ್ರಶಿಲೆ ಸಾಕ್ಷಿ (1970), ಕೆಂಪು ನೆನಪು (1988), ಮಾನವತೆಗೆದ್ದಾಗ (1995) ಕಥಾ ಸಂಕಲನಗಳಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯನ್ನು ಪ್ರತಿನಿಧಿಸುವ ಮತ್ತು ಅವುಗಳಿಗೆ ಸಂಬಂಧಪಟ್ಟ ಕಥೆಗಳನ್ನು ಮಾತ್ರ ಆಯ್ದುಕೊಂಡು ಅಧ್ಯಯನ ಮಾಡಲಾಗಿದೆ.
- ❖ ಅಮೃತರು 'ತೀರದತೆರೆ' (1974) ಎನ್ನುವ ಒಂದೇ ಕಾದಂಬರಿಯನ್ನು ಬರೆದಿದ್ದು ಅದು ಸೋಮೇಶ್ವರದ ಆಸುಪಾಸಿನ ಊರುಗಳ ಬಗೆಗಿನ ವಿಶಿಷ್ಟವಾದ ಚಿತ್ರಣವನ್ನು ನಮ್ಮ ಮುಂದಿಡುತ್ತದೆ. ಈ ಕಾದಂಬರಿಯಲ್ಲಿರುವ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣವನ್ನು ಚರ್ಚೆ ಮಾಡಲಾಗಿದೆ.

❖ ತುಳುನಾಟಕ ಸಂಪುಟ (2005), ಕಲ್ಲೋಜ ಬೀರು ಕಲ್ಕುಡ ಮತ್ತು ಇತರ ನಾಟಕಗಳು (2009) ನಾಟಕ ಸಂಪುಟಗಳಿಂದ ಆಯ್ದ ನಾಟಕಗಳು ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯನ್ನು ಪ್ರತಿನಿಧಿಸುವ ಸಂದರ್ಭಗಳನ್ನು ಪ್ರಬಂಧದಲ್ಲಿ ಚರ್ಚೆಮಾಡಲಾಗಿದೆ.

❖ ಯಕ್ಷಗಾನ ಕೃತಿ ಸಂಪುಟ (1990) ದಲ್ಲಿರುವ ಯಕ್ಷಗಾನವನ್ನು ಮೂಲ ಆಕರವಾಗಿಟ್ಟುಕೊಂಡು ಅಮೃತರ ಪ್ರಸಂಗಗಳಲ್ಲಿ ವ್ಯಕ್ತವಾಗುವ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯನ್ನು ಚರ್ಚೆಮಾಡಲಾಗಿದೆ.

❖ ಅಧ್ಯಾಯ ಐದರಲ್ಲಿ ಅಮೃತರ ಕಾವ್ಯಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಈ ಎಲ್ಲಾ ಕೃತಿಗಳನ್ನು ಒಳಪಡಿಸಿಕೊಂಡು ಅಮೃತರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ ಎನ್ನುವ ಮಹಾ ಪ್ರಬಂಧವನ್ನು ಬರೆಯಲಾಗಿದೆ.

**1.3 ಈ ಕುರಿತು ನಡೆದಿರುವ ಅಧ್ಯಯನಗಳು:**

ಅಮೃತ ಸೋಮೇಶ್ವರರ ಬಗೆಗಿನ ಅಧ್ಯಯನಗಳು ನಡೆದಿರುವುದು ತುಂಬಾ ಕಡಿಮೆ. ಲೇಖನಗಳ ರೂಪದಲ್ಲಿ ಪ್ರಕಟವಾಗಿರುವುದನ್ನು ಬಿಟ್ಟರೆ ಬೇರೆ ಯಾವುದೇ ದಾಖಲೆಗಳು ಸಿಗುವುದಿಲ್ಲ. ದಕ್ಷಿಣ ಕನ್ನಡದಲ್ಲಿ ತುಳು, ಕನ್ನಡ, ಮೋಯ ಮಲಯಾಳ ಹೀಗೆ ಮೂರು ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿರುವವರು ಯಾರೂ ಇಲ್ಲ. ಇಷ್ಟೆಲ್ಲಾ ಪ್ರತಿಭೆಯಿದ್ದರೂ ಅಮೃತಸೋಮೇಶ್ವರರ ಸಾಹಿತ್ಯದ ಬಗ್ಗೆ ಸಂಶೋಧನೆ ನಡೆಯದಿರುವುದು ತುಂಬ ವಿಷಾದನೀಯ ಸಂಗತಿಯಾಗಿದೆ.

ಅಮೃತರ ಕಾದಂಬರಿ 'ತೀರದ ತೆರೆ'ಯ ಬಗ್ಗೆ ವಿ.ಗ.ನಾಯಕರವರು ತಮ್ಮ ಲೇಖನವನ್ನು 'ಪ್ರತಿಸ್ಪಂದನ' (1997,ಪು.ಸಂ 36–42)ದಲ್ಲಿ ಬರೆದಿದ್ದಾರೆ. ಅದೇ ರೀತಿ ಕುಶಾಲಪ್ಪ ಡಿ.ಯವರ ವಿದ್ಯಾರ್ಥಿ ವಿಚಾರ ಸಂಕಿರಣ ಅಮೃತಸೋಮೇಶ್ವರ 'ತೀರದ ತೆರೆ' ಕಾದಂಬರಿಯಲ್ಲಿ ಚಿತ್ರಣಗೊಂಡಿರುವ ಪ್ರಾದೇಶಿಕ ಸಂಸ್ಕೃತಿಯ ಸ್ವರೂಪ(1997–98,ಪು.ಸಂ 1–14) ಎನ್ನುವ ಪ್ರಬಂಧ ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಮಂಗಳ ಸಂಪುಟದಲ್ಲಿ ಪ್ರಕಟವಾಗಿದೆ. ಎಲ್. ನಾಗಭೂಷಣಸ್ವಾಮಿಯವರ 'ತೀರದ ತೆರೆ'(1995,ಪು.ಸಂ 120) ಎನ್ನುವ ಲೇಖನ 'ಸಿರಿ' ಅಭಿನಂದನಾ ಗ್ರಂಥದಲ್ಲಿ ಪ್ರಕಟವಾಗಿದೆ. ಅಮೃತರ ಕಾವ್ಯಗಳ ಬಗ್ಗೆ ಡಿ.ಎಸ್.ನಾರಾಯಣರ 'ಅಮೃತಸೋಮೇಶ್ವರರ ತುಳು ಕನ್ನಡ ಕಾವ್ಯ'(1995,ಪು.ಸಂ 108–114) ಲೇಖನ 'ಸಿರಿ' ಅಭಿನಂದನಾ ಗ್ರಂಥದಲ್ಲಿ ಪ್ರಕಟವಾಗಿದೆ. ಪಾದೇಕಲ್ಲು ವಿಷ್ಣು ಭಟ್ಟರ 'ಶ್ರೀ ಅಮೃತ ಸೋಮೇಶ್ವರೆರೆನ ಕವನ ಸಾಹಿತ್ಯೊ' ಎನ್ನುವ ಲೇಖನ(1989,ಪು.ಸಂ 1–8) ಪನಿಯಾರ ನೆಂಪು ಸಂಚಿಕೆಯಲ್ಲಿ ಪ್ರಕಟವಾಗಿದೆ.

'ಅಮೃತರ ಕಥೆಗಳು ಒಂದು ಅವಲೋಕನ' ಎನ್ನುವ ಲೇಖನವನ್ನು ಎ.ಕೆ.ಧರ್ಮಪ್ಪ 'ಜಾಗೃತಿ' (1992 ಪು.ಸಂ 1-6) ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. 'ಅಮೃತರ ಸಣ್ಣ ಕಥೆಗಳು ಮತ್ತು ಕಾದಂಬರಿ' ಎನ್ನುವ ಲೇಖನ 'ಸಿರಿ'(ಮೋಹನ ಪಾರೆಪ್ಪಾಡಿ,1995,ಪು.ಸಂ 115-119) ಮತ್ತು 'ಪನಿಯಾರ'(ಮೋಹನ ವಾರೆಪ್ಪಾಡಿ,1989,ವು.ಸಂ 39-44) ಸಂಪುಟಗಳಲ್ಲಿ ಪ್ರಕಟವಾಗಿವೆ. ರಾಧಾಕೃಷ್ಣ ಕೆ. ಉಳಿಯತಡ್ಕರವರ 'ಅಮೃತ ಸೋಮೇಶ್ವರ ಅವರ ಸಣ್ಣಕತೆಗಳು' (2010,ಪು.ಸಂ 14-21) ಎನ್ನುವ ಲೇಖನ 'ನೆಲದ ಧ್ಯಾನ' ಪುಸ್ತಕದಲ್ಲಿ ವ್ರಕಟಗೊಂಡಿದೆ. 'ಅಮೃತರ ಕಥೆಗಳು ಸಮಸ್ಯೆ ಮತ್ತು ಸಮನ್ವಯ'(1995-96,ಪು.ಸಂ 1-11) ಎನ್ನುವ ರಘು ಇಡ್ಕಿದು ಅವರ ವಿಚಾರ ಸಂಕಿರಣದ ಪ್ರಬಂಧ ಮಂಗಳ ಸಂಪುಟದಲ್ಲಿ ಪ್ರಕಟವಾಗಿದೆ. ಅಮೃತಸೋಮೇಶ್ವರರ 'ಕೆಂಪು ನೆನಪು' ಕಥಾ ಸಂಕಲನದ ಒಂದು ವಿಶ್ಲೇಷಣೆ(1997-98, ಪು.ಸಂ 1-10) ಎನ್ನುವ ಶಿವಪ್ರಸಾದ ಎಂ. ಇವರ ವಿಚಾರ ಸಂಕಿರಣದ ಪ್ರಬಂಧ ಮಂಗಳ ಸಂಪುಟದಲ್ಲಿ ಪ್ರಕಟವಾಗಿದೆ. ಡಾ. ನಾದಾ ಶೆಟ್ಟಿ ಅವರ 'ಅಮೃತರ ನಾಟಕಗಳು'(1995,ಪು.ಸಂ 121-127) ಎನ್ನುವ ಲೇಖನ 'ಸಿರಿ' ಸಂಪುಟದಲ್ಲಿ ಪ್ರಕಟಗೊಂಡಿದೆ. ಎಂ. ಪ್ರಭಾಕರ ಜೋಷಿಯವರು 'ಪನಿಯಾರ' ನೆಂಪು ಸಂಚಿಕೆಯಲ್ಲಿ 'ಅಮೃತೆರೆನ ನಾಟಕೊಲು'(1989,ಪು.ಸಂ 33-38) ಎನ್ನುವ ಲೇಖನ ಪ್ರಕಟಿಸಿದ್ದಾರೆ. ಹರಿಶ್ಚಂದ್ರ ಕೆ. ಯವರ 'ಅಮೃತರ ತುಳುನಾಟಕಗಳ ಅಧ್ಯಯನ'(1994-95,ಪು.ಸಂ 1-13) ಎನ್ನುವ ಪ್ರಬಂಧ ಮಂಗಳ ಸಂಪುಟದಲ್ಲಿ ಪ್ರಕಟಗೊಂಡಿದೆ. 'ಅಮೃತ ಸೋಮೇಶ್ವರರ ತುಳುನಾಟಕಗಳಲ್ಲಿ ಪ್ರತಿಬಿಂಬಿತವಾಗಿರುವ ದುರಂತದ ಪರಿಕಲ್ಪನೆ'(1997-98, ಪು.ಸಂ1-12) ಎನ್ನುವ ವಾಸು ಎಂ. ಅವರ ಪ್ರಬಂಧ ಮಂಗಳ ಸಂಪುಟದಲ್ಲಿ ಪ್ರಕಟಗೊಂಡಿದೆ.

| | | |
|---|---|---|
| ಡಾ. ಸಂಪೂರ್ಣಾನಂದ ಬಳ್ಕೂರ | – | ಅಮೃತಸೋಮೇಶ್ವರ ಯಕ್ಷಗಾನ ಮತ್ತು ಪ್ರಸಂಗ ಸಾಹಿತ್ಯ ಪರಂಪರೆ ಮತ್ತು ಆಧುನಿಕತೆ (ಪಿಹೆಚ್. ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ 2007) |
| ಶ್ರೀ ಕೆ. ನಾರಾಯಣ ಮೂರ್ತಿ | – | ಅಮೃತಸೋಮೇಶ್ವರರ ಯಕ್ಷಗಾನ ಕೃತಿಗಳು (ಎಂ. ಫಿಲ್ ಪದವಿಗಾಗಿ ಮುಂಬಯಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧ |
| ಡಾ. ಪುರುಷೋತ್ತಮ ಬಿಳಿಮಲೆ | – | 'ಅಮೃತೆರ್ನ ಯಕ್ಷಗಾನ ಪ್ರಸಂಗೊಳು' (ಲೇ) (1989, ಪು.ಸಂ 10-23)'ಪನಿಯಾರ' ನೆಂಪು ಸಂಚಿಕೆ |

ಕೃ.ಶಾ. ಮರ್ಕಂಜ – ಅಮೃತರ ಯಕ್ಷಗಾನ ಸಾಹಿತ್ಯ (ಲೇ) 'ಸಿರಿ', (1995, ಪು.ಸಂ 144–149)

ರಘು ಇಡ್ಕಿದು ಇವರ 'ಶ್ರೀ ಅಮೃತ ಸೋಮೇಶ್ವರರ 'ಉಪ್ಪುಗಾಳಿ' ಕವನ ಸಂಕಲನದ ವಿಮರ್ಶೆ'(1994-95), ಬೇಬಿ ಕೆ. ಇವರ 'ಅಮೃತ ಸೋಮೇಶ್ವರರ ಯಕ್ಷಗಾನ ಪ್ರಸಂಗಗಳಲ್ಲಿ ವೈಚಾರಿಕತೆಯ ಪರಿಕಲ್ಪನೆ' ಮತ್ತು ರಾಧಾಕೃಷ್ಣ ಕಲ್ಚಾರ್‌ರವರ 'ಅಮೃತ ಸೋಮೇಶ್ವರರ ಯಕ್ಷಗಾನ ಪ್ರಸಂಗಗಳು'(1997–98) ಎನ್ನುವ ಪ್ರಬಂಧಗಳು ಮಂಗಳ ಸಂಪುಟದಲ್ಲಿ ಪ್ರಕಟವಾಗಿದೆ.

ಬೇ.ಸೀ. ಗೋಪಾಲಕೃಷ್ಣ – 'ಅಮೃತ ಸೋಮೇಶ್ವರರ ತುಳುಸೇವೆ' (ಲೇ), ತುಳುವರಿವರು ಪುಸ್ತಕದಲ್ಲಿ(1997.ಪು.ಸಂ 157–168)

ಡಾ.ಬಿ.ಶಿವರಾಮ ಶೆಟ್ಟಿ – 'ಅಮೃತ ಸೋಮೇಶ್ವರ' (ಲೇ) 2003, ಜಾನಪದ ತಲೆಮಾರು

ಡಾ.ನಾ. ದಾಮೋದರ ಶೆಟ್ಟಿ – 'ಹಿರಿಯ ಜಾನಪದ ವಿದ್ವಾಂಸ ಡಾ. ಅಮೃತ ಸೋಮೇಶ್ವರ' ಎನ್ನುವ ಪುಸ್ತಕ 2008ರಲ್ಲಿ ಪ್ರಕಟವಾಗಿದೆ.

ಡಾ.ನಾ. ದಾಮೋದರ ಶೆಟ್ಟಿ – 'ಸಾಮಾಜಿಕ ಕಾಳಜಿಯ ಅಮೃತ ಸೋಮೇಶ್ವರ' (ವ್ಯಕ್ತಿ ಚಿತ್ರ, 2010 ಪು.ಸಂ 96–98), ಒಂದೊಂದು ಮುಖದ ಒಂದೊಂದು ಮುಖ ಪುಸ್ತಕದಲ್ಲಿ ಪ್ರಕಟವಾಗಿದೆ.

ಎ.ಕೆ. ಧರ್ಮಪ್ಪ (ಸಂ) – 'ಶ್ರೀ ಅಮೃತ ಸೋಮೇಶ್ವರ ಬದುಕು, ಬರಹ, ಪುರಸ್ಕಾರ', 1997 ಪುಸ್ತಕ ಪ್ರಕಟವಾಗಿದೆ

ಈ ಮೇಲಿನ ಎಲ್ಲಾ ಲೇಖನಗಳು ಪರಿಚಯಾತ್ಮಕವಾಗಿವೆ ಮತ್ತು ಕೆಲವೊಂದು ಲೇಖನಗಳು ವಿಮರ್ಶಾತ್ಮಕವಾಗಿವೆ. ಸಂಪೂರ್ಣಾನಂದ ಬಳ್ಕೂರ ಅವರು ಅಮೃತರ ಯಕ್ಷಗಾನಗಳ ಪ್ರಸಂಗಗಳ ಮೇಲೆ ಮಾಡಿರುವ ಸಂಶೋಧನೆಯನ್ನು ಹೊರತುಪಡಿಸಿದರೆ ಅವರ ಸಾಹಿತ್ಯದ ಬಗ್ಗೆ ಸಂಶೋಧನೆಯು ನಡೆದಿಲ್ಲ. ನನ್ನ ಸಂಶೋಧನಾ ವಿಷಯವು ಈಗಾಗಲೇ ಬಂದಿರುವಂಥಹ ಲೇಖನ ಕೃತಿಗಳಿಗಿಂಥ ಸಂಪೂರ್ಣ ಭಿನ್ನವಾಗಿದೆ. ಅಮೃತ ಸೋಮೇಶ್ವರರ ಸಾಹಿತ್ಯವನ್ನು ಗಮನದಲ್ಲಿರಿಸಿಕೊಂಡು ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆ ದಾಖಲುಗೊಂಡಿರುವ ರೀತಿಯನ್ನು ಸಂಶೋಧನೆಗೆ ಒಳಪಡಿಸಲಾಗಿದೆ.

**1.4 ಅಧ್ಯಯನದ ಸೈದ್ಧಾಂತಿಕತೆ:**

"ಅಮೃತ ಸೋಮೇಶ್ವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ" ಎನ್ನುವ ವಿಷಯದ ಬಗೆಗಿನ ಸಂಶೋಧನಾ ಮಹಾಪ್ರಬಂಧ ಇದೇ ಮೊದಲಿನದ್ದು. ಈ 'ಪ್ರತಿನಿಧೀಕರಣ' ಎನ್ನುವ ಪರಿಕಲ್ಪನೆ ಇತ್ತೀಚಿನ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತತೆಯನ್ನು ಪಡೆದುಕೊಂಡ ಪದವಾಗಿದೆ. ಅಮೃತರ ಸಾಹಿತ್ಯವನ್ನು ಗಮನಿಸುವ ಜೊತೆಗೆ ಅಮೃತರ ವ್ಯಕ್ತಿತ್ವದ ಬಗೆಗಿನ ಮಾನಸಿಕ ಓದು ಇಲ್ಲಿ ಬಹಳ ಮುಖ್ಯವಾಗುತ್ತದೆ. ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ ಅಮೃತರ ಸಾಹಿತ್ಯದಲ್ಲಿ ಹೇಗೆ ಮೂಡಿಬಂದಿದೆ ಎನ್ನುವುದು ಈ ಅಧ್ಯಯನದ ಮಹತ್ವವನ್ನು ತಿಳಿಸುತ್ತದೆ. ನೆಲ, ಭಾಷೆ, ಆರಾಧನೆ, ಉಡುಗೆ-ತೊಡುಗೆ, ಬದುಕುವ ರೀತಿಗಳನ್ನು ಒಳಗೊಂಡ ಪ್ರಾದೇಶಿಕ ಸಂಸ್ಕೃತಿ ಮತ್ತು ಮನುಷ್ಯನ ದಿನನಿತ್ಯದ ಯೋಚನೆಗಳಲ್ಲಿ ಅಡಕವಾಗುವ ಸಾಮಾಜಿಕ ಚಿಂತನೆಯ ಅಂಶಗಳು ಒಂದು ಸಾಹಿತ್ಯದಲ್ಲಿ ಪ್ರತಿನಿಧೀಕರಣಗೊಂಡಾಗ ಓದುಗನ ಸಹೃದಯತೆ ಮತ್ತು ಲೇಖಕರ ಆತ್ಮಾಭಿವ್ಯಕ್ತಿ ಯಾವ ರೀತಿಯ ಆಲೋಚನೆಗಳನ್ನು ನಮ್ಮ ಮುಂದಿಡುತ್ತದೆ ಎನ್ನುವುದು ಅಮೃತರ ಸಾಹಿತ್ಯದಲ್ಲಿ ಸೈದ್ಧಾಂತಿಕವಾಗಿ ಗಮನಿಸಬಹುದು. ಅಮೃತರ ಸಾಹಿತ್ಯವನ್ನು ಸೈದ್ಧಾಂತಿಕವಾಗಿ ರೂಪಿಸಿಕೊಂಡಾಗ ಕಥೆ, ಕಾದಂಬರಿ, ನಾಟಕ, ಯಕ್ಷಗಾನ, ಕಾವ್ಯಗಳ ಮೂಲಕ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆ ರೂಪುಗೊಳ್ಳುವ ಅಂಶಗಳನ್ನು ಆಯ್ದುಕೊಂಡು ಪ್ರಬಂಧ ಸಂಶೋಧನಾತ್ಮಕವಾಗಿ ಮೂಡಿ ಬರಬೇಕು.

ಅಮೃತರ ಎಲ್ಲಾ ಬರಹಗಳಲ್ಲೂ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಗಟ್ಟಿತನ ಇದೆ. ಪ್ರಾದೇಶಿಕವಾದ ಮಣ್ಣಿನ ವಾಸನೆ ಮತ್ತು ಮನುಷ್ಯನ ಬದುಕಿನ ವಿವಿಧ ಮಜಲುಗಳನ್ನು ಪರಿಚಯಿಸುವಲ್ಲಿ ಸಾಮಾಜಿಕ ಚಿಂತನೆಗಳು ಪ್ರತಿನಿಧೀಕರಣಗೊಂಡು ಅವರು ವ್ಯಕ್ತಪಡಿಸುವ ಅಂಶಗಳು ಒಂದು ಶಿಷ್ಟ ಸಾಹಿತ್ಯವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ತುಳು, ಕನ್ನಡ, ಮೋಯ ಮಲಯಾಳ, ಜಾನಪದ ಹೀಗೆ ಅಮೃತರ ಕೈಯಾಡಿಸದ ಕ್ಷೇತ್ರಗಳಿಲ್ಲ. ತುಳು ಮತ್ತು ಕನ್ನಡ ಸಾಹಿತ್ಯಗಳನ್ನು ಸಮಾನವಾಗಿ ಗಮನಿಸಿದಾಗ ಅದರಲ್ಲಿ ತನ್ನದೇ ಆದ ಹೊಸ ಚಿಂತನೆಗಳು ರೂಪಪಡೆಯುವಂತೆ ಭಾಸವಾಗುತ್ತದೆ. ಅಮೃತರ ಸಾಹಿತ್ಯದಲ್ಲಿನ ಅಂಶಗಳನ್ನು ಸೈದ್ಧಾಂತಿಕವಾಗಿ ಗಮನಿಸಿದಾಗ ಒಂದು ಪ್ರದೇಶ ಒಳಗೊಂಡಿರುವ ಬೆಟ್ಟಗುಡ್ಡಗಳು, ಹೊಲಗದ್ದೆಗಳು, ಸಮುದ್ರ, ರಸ್ತೆ, ಆಚರಣೆ, ಆರಾಧನೆ, ಭಾಷೆ ಇವುಗಳನ್ನು ಸಂಪೂರ್ಣವಾಗಿ ಬಳಸಿಕೊಂಡ ಆಕರವಾಗಿ ಕಾಣುತ್ತದೆ. ಮನುಷ್ಯನ ಭಾಷೆಗೆ ಸಂಬಂಧಿಸಿದಂತೆ ಅವನು ಯೋಚಿಸುವ ರೀತಿ, ಕಲ್ಪನೆಗಳು ಆ ಪ್ರದೇಶದಲ್ಲಿರುವ ಅವನ ವಾಸ್ತವ್ಯ ತಾಣ ಅಂದರೆ ಮನೆ, ದಿನನಿತ್ಯದ ಸಂಪ್ರದಾಯಗಳ ಜೊತೆಗೆ ತನ್ನ ಬದುಕಿನ ರೀತಿ, ಯೋಚನೆಗಳು ಕಲ್ಪನೆ, ಕನಸುಗಳಲ್ಲಿ ಆತ ಒಂದು ಇಡೀ ದಿನವನ್ನು ಕಳೆಯುತ್ತಾನೆ. ಈ ಕಳೆಯುವಿಕೆಯ ಜೊತೆ ಜೊತೆಗೆ ಆತನ ಸಾಮಾಜಿಕ ಚಿಂತನೆಗಳು ಸಮಾಜಕ್ಕೆ ಸ್ಫೂರ್ತಿಯಾಗಿರುತ್ತದೆ. ಆ ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣವನ್ನು ಒಂದು ಸಾಹಿತ್ಯದ ಹಿನ್ನೆಲೆಯಲ್ಲಿ ಸೈದ್ಧಾಂತಿಕವಾಗಿ ಅಭ್ಯಾಸ ಮಾಡಬೇಕಾಗುತ್ತದೆ.

ಈ ಎಲ್ಲಾ ಹಿನ್ನೆಲೆಗಳಿಂದ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಬೇರುಗಳನ್ನು ಹುಡುಕಿಕೊಂಡು ಅಮೃತರ ಸಾಹಿತ್ಯಗಳಾದ ಕಥೆ, ಕಾದಂಬರಿ, ನಾಟಕ, ಯಕ್ಷಗಾನ, ಕಾವ್ಯ ಇವುಗಳನ್ನು ವಿವರಣಾತ್ಮಕ ಮತ್ತು ವಿಶ್ಲೇಷಣಾ ವಿಧಾನಗಳಿಂದ ಅಧ್ಯಯನ ಮಾಡಲಾಗಿದೆ.